## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**:- 2025-26ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 189ರಂತೆ ಪರಿಶಿಷ್ಟ ಜಾತಿ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ 1.25 ಲಕ್ಷ ರೂ. ಸಹಾಯಧನವನ್ನು ನಿಗಮಗಳ ಮೂಲಕ ನೀಡಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಕುರಿತು.

**ಓದಲಾಗಿದೆ:-**
1. 2025-26ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ -189 .
2. ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಇವರ ಪತ್ರ ಸಂಖ್ಯೆ: ಅಂಅನಿ/ಕೈ-ತ/e 198689/2024-25/32 ದಿನಾಂಕ: 29.03.2025.
3. ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 328 ವೆಚ್ಚ-3/2025, ದಿನಾಂಕ: 15-04-2025.
4. ಸರ್ಕಾರದ ಆದೇಶ ಸಂಖ್ಯೆ:STW/SECB/STC/115/2025, ದಿನಾಂಕ:19.06.2025.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮಾಂಕ(1)ರಲ್ಲಿ, 2025-26ನೇ ಸಾಲಿನ ಆಯವ್ಯಯ ಭಾಷಣ ಕಡಿಕೆ- 189ರಲ್ಲಿ "ಪರಿಶಿಷ್ಟ ಜಾತಿ ಪರಿಶಿಷ್ಟ/ಪಂಗಡ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ 1.25 ಲಕ್ಷ ರೂ. ಸಹಾಯಧನವನ್ನು ನಿಗಮದ ಮೂಲಕ ನೀಡಲಾಗುವುದು" ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಇವರು 2025-26ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿನ ಕ್ರಮ ಸಂಖ್ಯೆ:189ರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ. 1.25 ಲಕ್ಷ ಸಹಾಯಧನವನ್ನು ನಿಗಮದ ಮೂಲಕ ನೀಡಲಾಗುವುದು ಎಂದು ಘೋಷಣೆ ಮಾಡಲಾಗಿದೆ. ಆದರೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 174 ಎಸ್.ಡಿ.ಸಿ 2013, ದಿನಾಂಕ: 31-12-2013ರ ಆದೇಶದಲ್ಲಿ ಹೈನುಗಾರಿಕೆಯನ್ನು ನಬಾರ್ಡ ಮಾರ್ಗದರ್ಶಿ ಘಟಕ ವೆಚ್ಚದಂತೆ ಅನುಷ್ಠಾನ ಮಾಡಲು ಮಂಜೂರಾತಿ ನೀಡಲಾಗಿತ್ತು. ಇತ್ತೀಚೆಗೆ ನಿಗಮದಿಂದ ಮತ್ತು ಇತರೆ ನಿಗಮಗಳಿಂದ ಹೈನುಗಾರಿಕೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿಲ್ಲ. ಸದರಿ ಆದೇಶದಲ್ಲಿ ನಿಗಧಿಪಡಿಸಿರುವ ರೂಪರೇಷಗಳು ಹಾಗೂ ಷರತ್ತುಗಳಂತೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ 2025-26ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ(3)ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹೈನುಗಾರಿಕೆಯಲ್ಲಿ ಪ್ರೋತ್ಸಾಹ ನೀಡಲು ಎರಡು ಹಸು/ಎಮ್ಮೆಗಳ ಖರೀದಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ 1.25 ಲಕ್ಷ ರೂ. ಸಹಾಯಧನವನ್ನು ನಿಗಮದ ಮೂಲಕ ನೀಡಲು ಆಯವ್ಯಯ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಆರ್ಥಿಕ

S.V
29/07/2025

ಇಲಾಖೆಯ ಸಲಹಾ ಟಿಪ್ಪಣಿಯಲ್ಲಿ ನಿಗಮಗಳಿಗೆ ಹಂಚಿಕೆ ಮಾಡಿರುವ ಅನುದಾನಕ್ಕೆ ಸೀಮಿತವಾದಂತೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ನಿಗಮಗಳ ಪಿಡಿ ಖಾತೆಯಲ್ಲಿರುವ ಮೊತ್ತವನ್ನು ಬಳಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತಿಳಿಸಿರುತ್ತಾರೆ.

ಮೇಲೆ ಓದಲಾದ, ಕ್ರಮಾಂಕ (4)ರ ಸರ್ಕಾರದ ಆದೇಶದಲ್ಲಿ 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ -189ಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಪಂಗಡ ಇಲಾಖೆಯಿಂದ

ಪರಿಶಿಷ್ಟ ಪಂಗಡದ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಪ್ರತ್ಯೇಕ ಆದೇಶವನ್ನು ಹೊರಡಿಸಲಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪಶುಸಂಗೋಪನೆ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳನ್ನು ಮತ್ತು ನಬಾರ್ಡ ಮಾರ್ಗದರ್ಶಿಗಳನ್ನು ಪರಿಶೀಲಿಸಿ, ಸದರಿ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನಿಗಮಗಳಿಂದ 2025-26ನೇ ಸಾಲಿನಲ್ಲಿ ನಿಗಮಗಳಿಗೆ ನೀಡಲಾಗಿರುವ ಅನುದಾನದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 122 ಎಸ್‌ಡಿಸಿ 2025 (ಭಾ-2), ಬೆಂಗಳೂರು</u>**
**<u>ದಿನಾಂಕ: 29-07-2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಪರಿಶಿಷ್ಟ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ 1.25 ಲಕ್ಷ ರೂ. ಸಹಾಯಧನವನ್ನು ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನಿಗಮಗಳಿಂದ 2025-26ನೇ ಸಾಲಿನಲ್ಲಿ ನಿಗಮಗಳಿಗೆ ನೀಡಲಾಗಿರುವ ಅನುದಾನದಲ್ಲಿ ನೀಡಲು ಮತ್ತು ಅನುಬಂಧದಲ್ಲಿನ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಯೋಜನೆಗೆ ತಗಲುವ ವೆಚ್ಚವನ್ನು ನಿಗಮಗಳಿಗೆ ಸ್ವಯಂ ಉದ್ಯೋಗ ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 328 ವೆಚ್ಚ-3/2025, ದಿನಾಂಕ: 15-04-2025 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 34 ಐಎಂಎಂ 2025, ದಿನಾಂಕ:24.04.2025ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S.V 29/07/2025
**(ಎಸ್.ವಿ. ಕಲಾವತಿ)**
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

**<u>ಇವರಿಗೆ:-</u>**

1. ಮಹಾಲೇಖಪಾಲರು (ಎ&ಇ ಲೆಕ್ಕ ಪರಿಶೋಧನೆ 1,2) ಕರ್ನಾಟಕ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, SCSP/TSP ಕೋಶ, ಡಾ:ಬಿ.ಆರ್. ಅಂಬೇಡ್ಕರ್ ಭವನ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಬೆಂಗಳೂರು
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಡಾ:ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ, ಬೆಂಗಳೂರು.
13. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**<u>ಪ್ರತಿಗಳು:</u>**

1. ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 3& 9), ವಿಧಾನ ಸೌಧ, ಬೆಂಗಳೂರು.

**ಸರ್ಕಾರದ ಆದೇಶ ಸಂಖ್ಯೆ: ಸಕಇ 122 ಎಸ್‌ಡಿಸಿ 2025 (ಭಾ-2), ಬೆಂಗಳೂರು ದಿನಾಂಕ: 29 -07-2025ಕ್ಕೆ ಅನುಬಂಧ**

## ಪರಿಶಿಷ್ಟ ಜಾತಿ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಹಸು/ಎಮ್ಮೆ ಖರೀದಿಸಲು ಸಹಾಯಧನ ನೀಡುವ ಬಗ್ಗೆ ಮಾರ್ಗಸೂಚಿಗಳು

### I. ಯೋಜನಾ ವ್ಯಾಪ್ತಿ:

ಪಶುಸಂಗೋಪನಾ ಇಲಾಖೆಯಿಂದ ಹಾಲು ಉತ್ಪಾದಕರಿಗೆ ಉತ್ತೇಜನ ನೀಡುವಲ್ಲಿ SCSP/TSP ಯೋಜನೆಯಡಿಯಲ್ಲಿ ನೀಡಿದ ಅನುದಾನದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಮಿಶ್ರತಳಿ ಘಟಕವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ, ಸಮಾಜ ಕಲ್ಯಾಣ ಇಲಾಖೆಗಳ ವ್ಯಾಪ್ತಿಯಲ್ಲಿನ ನಿಗಮಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು 2025-26ನೇ ಸಾಲಿನ ಆಯವ್ಯಯ ಘೋಷಣೆಯಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸಮುದಾಯದವರು ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ 1.25 ಲಕ್ಷ ರೂ. ಸಹಾಯಧನವನ್ನು ನೀಡಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

### II. ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು:

1) ಪರಿಶಿಷ್ಟ ಜಾತಿ ಸಮುದಾಯದ ರೈತರ ವಿವರಗಳು FRUITS ID ಯಲ್ಲಿ ಲಭ್ಯವಿರುತ್ತವೆ. ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಮತ್ತು ಆಸಕ್ತಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು,ಕೂಲಿ/ಕೃಷಿ ಕಾರ್ಮಿಕರನ್ನು ಆದ್ಯತೆ ಮೇಲೆ ಆಯ್ಕೆ ಮಾಡಿಕೊಳ್ಳುವುದು.
2) ಫಲಾನುಭವಿಗಳು ಕಡ್ಡಾಯವಾಗಿ FRUITS ID (ಗುರುತಿನ ಸಂಖ್ಯೆ) ಹೊಂದಿರಬೇಕು.
3) ಆಯ್ಕೆಗೊಂಡ ಫಲಾನುಭವಿಗಳು ಕಡ್ಡಾಯವಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗಿರಬೇಕು ಅಥವಾ ಸದಸ್ಯತ್ವ ಕಡ್ಡಾಯವಾಗಿ ಪಡೆಯಬೇಕು. ನಂತರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಕಡ್ಡಾಯವಾಗಿ ಹಾಲು ಪೂರೈಸುವ ಷರತ್ತಿಗೆ ಒಳಪಟ್ಟು ಮುಚ್ಚಳಿಕೆಯನ್ನು, ಫಲಾನುಭವಿಗಳಿಂದ ಪಡೆದು ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.
4) ಪಶುಪಾಲನಾ ಇಲಾಖೆಯಿಂದ ಸದರಿ ಯೋಜನೆಯಲ್ಲಿ ಹೈನುಗಾರಿಕೆಗೆ ಹಸು/ಎಮ್ಮೆ ಖರೀದಿಸಲು ಸಹಾಯಧನ ಸವಲತ್ತು ಪಡೆದಿರುವ ಫಲಾನುಭವಿಗಳು ಸಮಾಜ ಕಲ್ಯಾಣ ಇಲಾಖೆಯ ನಿಗಮಗಳಿಂದ ಸಹಾಯಧನ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.
5) ಪರಿಶಿಷ್ಟ ಜಾತಿ ಸಮುದಾಯದ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.
6) ಅರ್ಜಿದಾರರು FRUITS ತಂತ್ರಾಂಶದಲ್ಲಿ ನೋಂದಣಿ ಹೊಂದಿರಬೇಕು.

### II. ಫಲಾನುಭವಿಯ ಆಯ್ಕೆ :

1) ವಿಧಾನಸಭಾ ಕ್ಷೇತ್ರವಾರು ಆರ್ಥಿಕ/ಭೌತಿಕ ಗುರಿಗಳನ್ನು ನಿಗದಿಪಡಿಸುವುದು.
2) ನಿಗಮಗಳಿಂದ ಸದರಿ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ನೀಡಿ, ಅರ್ಜಿಗಳನ್ನು ಆಹ್ವಾನಿಸುವುದು.
3) ಪ್ರಸ್ತುತ ಜಾರಿಯಲ್ಲಿರುವಂತೆ, ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯಿಂದಲೇ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಆಯ್ಕೆ ಮಾಡುವಲ್ಲಿ ಹೈನುಗಾರಿಕೆ ಮಾಡಲು ಆಸಕ್ತ ಫಲಾನುಭವಿಗಳಿಗೆ ಆದ್ಯತೆ ನೀಡುವುದು.

S.V
29/07/2025

4) ಫಲಾನುಭವಿಗಳನ್ನು ನಿಗದಿತ ಗುರಿಗಳಿಗೆ ಅನುಗುಣವಾಗಿ ಆಯ್ಕೆ ಸಮಿತಿಯ ಮೂಲಕ ವಿಧಾನಸಭಾ ಕ್ಷೇತ್ರವಾರು ನಿರ್ಧಿಷ್ಟ ಸಮಯದಲ್ಲಿ ಆಯ್ಕೆ ಮಾಡುವುದು.
5) ಫಲಾನುಭವಿಗಳ ವಂತಿಕೆಯನ್ನು ಸಾಲದ ರೂಪದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಬ್ಯಾಂಕ್‌ಗಳಾದ DCC/Apex Bank/PACSಗಳಿಂದ ಪಡೆಯುವ ಬಗ್ಗೆ ನಿಗಮಗಳು ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಕಳುಹಿಸುವುದು.
6) ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್‌ಗಳಿಗೆ ಬಿಡುಗಡೆಗೊಳಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

## IV. ಹಸು/ಎಮ್ಮೆ ಖರೀದಿ ಸಮಿತಿ:

1. ಆಯ್ಕೆಯಾದ ಫಲಾನುಭವಿಗಳಿಗೆ, ಹಸು/ಎಮ್ಮೆಗಳನ್ನು ಖರೀದಿಸಿ ಒದಗಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1 | ಜಿಲ್ಲಾ ವ್ಯವಸ್ಥಾಪಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | ಅಧ್ಯಕ್ಷರು |
| 2 | ಜಿಲ್ಲಾ ವ್ಯವಸ್ಥಾಪಕರು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ | ಸದಸ್ಯರು |
| 3 | ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಇಲಾಖೆ | ಸದಸ್ಯರು |
| 4 | ಜಿಲ್ಲಾ ಮಟ್ಟದ ಬ್ಯಾಂಕ್ ಪ್ರತಿನಿಧಿಗಳು | ಸದಸ್ಯರು |
| 5 | ಜಿಲ್ಲಾ ಮಟ್ಟದ ವಿಮಾ ಕಂಪನಿ ಪ್ರತಿನಿಧಿಗಳು | ಸದಸ್ಯರು |
| 6 | ಜಿಲ್ಲಾ ಮಟ್ಟದ ವಿಮಾ ಕಂಪನಿ ಪ್ರತಿನಿಧಿಗಳು | ಸದಸ್ಯರು |

**2.** ರಾಸುಗಳನ್ನು ಪಕ್ಕದ ಹೊರ ರಾಜ್ಯದಿಂದ ಅಥವಾ ಕನಿಷ್ಠ 100 ಕಿ.ಮೀ ಪರಿಣಿತಿಯ ಹೊರಗಿನಿಂದ ಖರೀದಿಸತಕ್ಕದ್ದು. ಖರೀದಿ ಸಮಯದಲ್ಲಿ ಆಯಾ ಜಿಲ್ಲೆ/ಪ್ರದೇಶಕ್ಕೆ ಸೂಕ್ತವಾದ ತಳಿಯನ್ನು ಖರೀದಿಸಲು ಆಧ್ಯತೆ ನೀಡುವುದು.
3. ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ ದಿನಕ್ಕೆ 8-10 ಲೀ ಹಾಲು ನೀಡುವ ಒಂದು ಹಸು/ಎಮ್ಮೆ ಖರೀದಿಸುವುದು. ಎರಡನೇ ಹಸು/ಎಮ್ಮೆ ಮಧ್ಯ ವಯಸ್ಸು/ಕರುಗಳನ್ನು ಖರೀದಿಸಿದ್ದಲ್ಲಿ ಘಟಕ ಮೊತ್ತದಿಂದ ಎರಡು ರಾಸುಗಳನ್ನು ಖರೀದಿಸಲು ಸಾಧ್ಯವಾಗುತ್ತದೆ.
4. ಸದರಿ ಹಸು/ಎಮ್ಮೆಯನ್ನು ಖರೀದಿಸುವ ಸ್ಥಳದಲ್ಲಿ ರಾಸುಗಳ ಮಾರಾಟಗಾರರು ಮತ್ತು ಫಲಾನುಭವಿಗಳು ಇಬ್ಬರು ಉಪಸ್ಥಿತರಿರುವ ಹಸು/ಎಮ್ಮೆ ಕರುಗಳ ಭಾವಚಿತ್ರಗಳನ್ನು ತೆಗೆದುಕೊಳ್ಳುವುದು.
5. ಖರೀದಿಸುವ ರಾಸುಗಳಿಗೆ ಕಡ್ಡಾಯವಾಗಿ ಮೂರು ವರ್ಷಕ್ಕೆ ವಿಮೆ ಮಾಡಿಸತಕ್ಕದ್ದು.
6. ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಬ್ಯಾಂಕ್‌ಗಳಿಗೆ ಸಹಾಯಧನವನ್ನು Deposit ಮಾಡುವುದು.
7. ಖರೀದಿಸಿದ ರಾಸುಗಳನ್ನು ಗುರುತಿಸುವ ಬಗ್ಗೆ Tattooing or ear tagging ಕಡ್ಡಾಯವಾಗಿ ಮಾಡತಕ್ಕದ್ದು. ಖರೀದಿಸಿದ ರಾಸುಗಳಿಗೆ ಗುರುತಿನ ಸಂಖ್ಯೆಯನ್ನು ನೀಡಿ, ನಿಗಮಗಳ ವೆಬ್‌ಸೈಟ್‌ಗಳಲ್ಲಿ ದಾಖಲಿಸುವುದು.
8. ರಾಸುಗಳ ವಯಸ್ಸು, ಹಾಲು ಉತ್ಪಾದನೆ ಮತ್ತು ಆರೋಗ್ಯದ ಬಗ್ಗೆ ಪಶುವೈದ್ಯರಿಂದ ಪ್ರಮಾಣ ಪತ್ರ ಪಡೆಯುವುದು.

S.V
29/07/2025

9. ಪಶುಸಂಗೋಪನೆ ಇಲಾಖೆಯ ಸಹಾಯದಿಂದ ಹಸು/ಎಮ್ಮೆಗಳಿಗೆ ರೋಗನಿರೋಧಕ ಲಸಿಕೆಗಳನ್ನು ಮಾಡಿಸುವುದು.
10. ಹಸು/ಎಮ್ಮೆಗಳಿಗೆ ಮೇವು ಮತ್ತು ಶೆಡ್ ಇತ್ಯಾದಿಗಳನ್ನು ಫಲಾನುಭವಿಗಳೇ ಅವರ ಸ್ವಂತ ಖರ್ಚಿನಿಂದ ಭರಿಸತಕ್ಕದ್ದು.

**V. ಘಟಕ ವೆಚ್ಚದ ಬಗ್ಗೆ (ಸೂಚಿಸಿರುವ ದರಗಳು ನಬಾರ್ಡ್ ನಿಂದ 2024-25ನೇ ಸಾಲಿನಲ್ಲಿ ನಿಗಧಿಪಡಿಸಿರುವ ದರಗಳು)**

| ಕ್ರ. ಸಂ | ವಿವರಗಳು | ಒಂದು ಹಸುವಿಗೆ (ಮಿಶ್ರತಳಿ/ಜೆರ್ಸಿ) ಭರಿಸಬೇಕಾದ ವೆಚ್ಚ (ರೂ.ಗಳಲ್ಲಿ) | ಒಂದು ಎಮ್ಮೆಗೆ (ಮಿಶ್ರತಳಿ/Graded Murrah etc.) ಭರಿಸಬೇಕಾದ ವೆಚ್ಚ (ರೂ.ಗಳಲ್ಲಿ) | ಸೂರ್ತಿ/ ಧಾರವಾಡ (ರೂ.ಗಳಲ್ಲಿ) |
|---|---|---|---|---|
| 1 | ಹಸು/ಎಮ್ಮೆ ದರ | 70,000 | 80,000 | 50,000 |
| 2 | ಜಾನುವಾರು ವಿಮೆ ಮೊತ್ತ | 8,400 | 9,600 | 6,000 |
| 3 | Concentrated feed for 30 days | 7,500 | 8,000 | 6,000 |
| 4 | ಒಟ್ಟು ಘಟಕ ವೆಚ್ಚ | 85,900 | 97,600 | 62,000 |
| 5 | ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚ | 1,71,800 | 195, 200 | 1,24000 |
| 6 | ಸಾಗಾಣಿಕೆ ವೆಚ್ಚ | ವಾಸ್ತವಿಕ ವೆಚ್ಚ | ವಾಸ್ತವಿಕ ವೆಚ್ಚ. | ವಾಸ್ತವಿಕ ವೆಚ್ಚ. |

**Note:** ಎರಡು ಎಮ್ಮೆ/ಹಸುಗಳಿಗೆ ಸಾಗಾಣಿಕೆ ವೆಚ್ಚದೊಂದಿಗೆ ಘಟಕ ವೆಚ್ಚವನ್ನು ಪರಿಗಣಿಸಿ, ಸದರಿ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ. 1.25 ಲಕ್ಷ ಗಳ ಸಹಾಐಧನವನ್ನು ನೀಡುವುದು.

1) ನಿಗಮಗಳ ಅಧಿಕಾರಿಗಳು ಸದರಿ ಯೋಜನೆಯನ್ನು ದುರುಪಯೋಗವಾಗದಂತೆ ಸಮರ್ಪಕವಾಗಿ ಅನುಷ್ಠನಗೊಳಿಸತಕ್ಕದ್ದು.

S.V 29/07/2025
(ಎಸ್.ವಿ. ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

29/7/25